# ದೃಷ್ಟಿಹೀನರಿಗೆ ದೀಪಾವಳಿ

ಇಡೀ ಜಗತ್ತು ಬೆಳಕಿನ ಬೆನ್ನು ಬಿದ್ದಿರುವಾಗ ನಮ್ಮ ನಡುವೆಯೇ ಒಂದಷ್ಟು ಜನರ ಬದುಕು ಕತ್ತಲಲ್ಲಿ ಮುಳುಗಿದೆ. ಬೆಳಕಿನ ನಿರೀಕ್ಷೆಯಲ್ಲಿರುವ ಅವರು ನೇತ್ರದಾನಿಗಳಿಗಾಗಿ ಕಾಯುತ್ತಿದ್ದಾರೆ. ನಾವೆಲ್ಲ, ನೇತ್ರದಾನಿಗಳಾದರೆ ದೃಷ್ಟಿಹೀನರ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು. ಕತ್ತಲೆ ಕವಿದಿರುವ ಕಣ್ಣುಗಳಲ್ಲಿ ಬೆಳಕು ಮೂಡಿಸುವ ಸಂಕಲ್ಪ ತೊಡಲು ದೀಪಾವಳಿಗಿಂತಲೂ ಉತ್ತಮ ಸಂದರ್ಭ ಬೇರೆಯದಿದ್ದೀತೆ? ದೀಪಾವಳಿ ಬೆಳಕಿನ ಹಬ್ಬ. ಹಣತೆ ಹಚ್ಚುವ ಹಬ್ಬ. ಹಣತೆ ಬೆಳಕೂ ಹೌದು, ಅರಿವೂ ಹೌದು. ಇಷ್ಟು ವರ್ಷಗಳ ಕಾಲ ಮಣ್ಣಿನ ಹಣತೆ ಬೆಳಗಿದ್ದಾಯಿತು; ಅಂಗಳ–ಬಯಲುಗಳಲ್ಲಿ ಲಕ್ಷ ಲಕ್ಷ ಬೆಳಕಿನ ಮತಾಪು ಉರಿಸಿದ್ದಾಯಿತು. ಈಗ ಕಣ್ಣುಗಳ ಮೂಲಕ ಹಣತೆ ಹಚ್ಚುವ ಸಮಯ. ನೇತ್ರದಾನದ ಬಗ್ಗೆ ಅರಿಯುವ ಹಾಗೂ ನೇತ್ರದಾನಕ್ಕೆ ಮನಸ್ಸು ಮಾಡುವ ಮೂಲಕ ಈ ಬಾರಿಯ ದೀಪಾವಳಿಯನ್ನು ಅರ್ಥಪೂರ್ಣವಾಗಿಸೋಣ.

■ ಶಶಿಕುಮಾರ್ ಸಿ.

